ಕಲಬುರ್ಗಿಯಂತಹ ರಣಬಿಸಲಾಗೂ ನಾಕ ನಾಕ ಒಲಿ ಮುಂದ ಅಡುಗಿ ಮಾಡೋದಂದ್ರ ಸುಮ್ನಲ್ಲ. ಉರಿಮೂತ್ರ ಆಗಿ ಹೊಡಕೊಬಡಕೊ ಆಗ್ತದ. ಹಂಡೆಗಟ್ಟಲೆ ಪಂಚಪಕ್ವಾನ್ನ ಮಾಡಿದ್ರೂ ಅಡಿಗಿಯವರು ಮಾತ್ರ ಸತ್ತವರ ಮನ್ಯಾಗಿನಂಗ ನೀರ ಮಜ್ಜಿಗಿ ಅನ್ನ ಉಂಡು ಕೈ ತೊಳಕೋತಾರ. ಇದ್ದವರು, ಪ್ರೆಸ್ಟೀಜ್ ಸಲುವಾಗಿ ಐಸ್ಕ್ರೀಮ್ ವ್ಯವಸ್ಥಾ ಮಾಡಿದ್ರ... ಇವರು ಭಿಡ್ಯಾ ಇಲ್ಲದ ಬಾಯಿತೆರದು ಕೇಳಿ ಒಂದೆರಡು ಕಪ್ ತಿಂದು ಹೊಟ್ಟಿ ತಣ್ಣಗ ಮಾಡ್ಕೋತಾರ.

ಕಲ್ಯಾಣ ಮಂಟಪಗಳನ್ನ ಕಟ್ಟಿಸುವ ದಣಿಗಳು ಧೊಡ್ ಧೊಡ್ ಹಾಲು, ಏಸಿ, ಕೂಲರ್, ಡಿಸೈನಿನ ಡೈನಿಂಗ್ ಹಾಲು, ಗ್ರ್ಯಾಂಡ್ ಎಂಟ್ರೆನ್ಸು ಏನೆಲ್ಲ ಭರ್ಜರಿಯಾಗಿ ಮಾಡಿದ್ರೂ ಅಡಿಗೆ ಮನೆ ಮಾತ್ರ ಕಿಷ್ಕಿಂಧ ನಗರ ಆಗಿರುತ್ತದೆ. ಇಕ್ಕಟ್ಟಿನ ಜಾಗ, ಕತ್ತಲು, ಮ್ಯಾಲ ಟಿನ್ ಶೆಡ್ಡು. ಗಂಡಸರು ಸಣ್ಣ ಪಂಜಿ ಉಟ್ಟುಕೊಂಡು ತೆರೆದ ಎದಿ, ಬೆನ್ನಿನೊಳಗ ಬೆವರು ಸುರದರೂ ಮೇಲ್ವಸ್ತ್ರದಿಂದ ಆಗಾಗ ಒರೆಸಿಕೊಂಡು ನಿರುಮ್ಮಳಾಗ್ತಾರ. ಆದರ, ಹೆಂಗಸರೂ... ಕುತ್ತಿಗಿಲಿಂದ ಇಳಿಯೋ ಗಳ ಗಳ ಬೆವರು ಎರಡು ಮೊಲೆಗಳ ನಡುವಿನ ಕಣಿವೆಯೊಳಗೆ ಜಲಪಾತದಂತೆ ಹರಿಯುತ್ತ ಬ್ಲೌಸಿನ ಕೊನಿ ಹುಕ್ಕಿಗಿ ಬಂದು ಉಸಕಿನೊಳಗ ಹೋದಂಗ ಇಂಗಿಹೋಗ್ತದ. ಗಂಡು ಹುಡುಗರು ಓಡಾಡುತ್ತಿದ್ದರೆ ಸೆರಗು ಹಂಗ ಹಿಂಗ ಆಗಬಾರದು ಅಂತ ಕುತ್ತಿಗಿ ಕಡೆ ಎಳಿಯೋದೆ ಎಳಿಯೋದು. ಕುಪ್ಪಸದ ಬೆನ್ನಿನ ಭಾಗ ತೊಯ್ದು ಬಣ್ಣಾನೇ ಬ್ಯಾರೆ ಆಗಿದ್ದರ... ಕೊಂಕಳದ ಸಂದಿಯ ಮಾತಂತೂ ಬ್ಯಾಡ ಬ್ಯಾಡ. ತಮ್ಮ ಬೆವರಿನ ವಾಸನೆ ತಮಗೆ ಅಸಹ್ಯ ಅನ್ನಸ್ತದ. ಹಣೆಗೆ ಬೆವರ ಹನಿ ಬಾಸಿಂಗದಂಗೆ ಸಾಲುಗಟ್ಟಿದ್ದು ನಂತರ ಒಂದಕ್ಕೊಂದು ಹನಿ ಕಲಿತು ಮೂಗಿನ ನೇರಕ್ಕೆ ಸೀ...ದ ಕೆಳಗಿಳಿದು ಮೂಗುತಿ ಹಂಗ ನಿಂತು ಜೋಕಾಲಿ ಆಡುತ್ತಿದ್ದು ಭಾರ ಜಾಸ್ತಿ ಆಗುತ್ತಲೇ ಟಪ್ಪಂತ ತಾವು ಲಟ್ಟಿಸೊ ಹಿಟ್ಟಿನಮ್ಯಾಲ ಬಿದ್ದು ಚಪಾತಿ ಉಪ್ಪುಪ್ಪು ಆಗಿ ಒಂದು ನಮೂನೆ ರುಚಿ ಹೆಚ್ಚಾಗಿಬಿಡ್ತದ.

ಈ ಕೆಟ್ ಬ್ಯಾಸಗಿಯೊಳಗೇ... ಅಡಗಿಯವರಿಗೆ ನಾಕರೊಕ್ಕ ಹುಟ್ಟೊ ದಿನಗಳು. ಸೀಜನ್ ಇದ್ದಾಗ ಒಂದೊಂದು ಸಲ ಎರಡೆರಡು ಲಗ್ನದ ಅಡುಗಿ ಜುಮ್ಮೆದಾರಿ ವಹಿಸ್ಕೋತಾರ. ಹೀಂಗ ಕಾಂಟ್ರ್ಯಾಕ್ಟ್ ತೊಗೊಂಡು ನಿಭಾಯಿಸುವವರು ಮೊದಮೊದಲು ಬರಿ ಗಂಡಸರೆ ಇದ್ದರು. ಆದ್ರ ಈಗ ಸುನಂದಾನಂತಹವರು ಫೀಲ್ಡ್‌ಗೆ ಬಂದದ್ದು ಕೆಲವರಿಗೆ ಬಿಸಿ ತುಪ್ಪ ಆಗಿತ್ತು.

ಪ್ರಾರಂಭದಾಗ, "ಆಕೆಏನು ಹೆಂಗಸು. ಎಷ್ಟು ಮಾಡಿದರೂ ಗಂಡಸರಂಗ ಆಗ್ತದೇನು? ಯಾವತ್ತಿದ್ರೂ ರುಚಿಯಾದ ಅಡಗಿಗಿ ಭೀಮಪಾಕ ನಳಪಾಕನೇ ಅಂತಾರ. ಸುನಂದಾಬಾಯಿ ಎಷ್ಟುದಿನ ಕುಣಿತಾಳ ನೋಡೋಣು" ಅಂತ ಮೀಸಿ ತಿರುವಿದ್ರು. ಆ ಮಾತೆಲ್ಲ ಗಾಳಿಯೊಳಗ ಹಾರಾಡಿ ಸುನಂದಾಳ ಕಿವಿಗಿ ಬಿತ್ತು. "ಆ ಭೀಮಸೇನಗ ನಳಮಹಾರಾಜಗ ಅನ್ನದ ಸೌಟು ಕೊಟ್ಟಾಕಿ ಅನ್ನಪೂರ್ಣೇಶ್ವರಿ ಅನ್ನೋದು ಅವರಿಗಿ ಗೊತ್ತಿಲ್ಲ... ಪಾಪ!" ಅಂತ ಅವರ ಮಾತು ಹುಶಾರಿತನದಿಂದ ನಿವಾಳಿಸಿ ಹಾಕತಿದ್ದಳು.

ಸುನಂದಾ ಬಹಳ ಧಾಡಸಿ ಹೆಂಗಸು. ಸೀಜನ್ ಇದ್ದಾಗ ದಿನನಿತ್ಯದ ಭಕ್ತಿ ಮನಿಗಳಿಗೆ ಹೊಸದಾಗಿ ಅಡುಗಿ ಮಾಡಲು ಬಂದವರನ್ನು ಕಳಿಸಿಕೊಡತಿದ್ದಳು. ತಾನು ಸಮಾರಂಭಕ್ಕ ಅಡುಗಿಗಿ ಹೋಗಿ ಜೊತಿಗಿರೋರನ್ನ ಹುರಿದುಂಬಿಸಿ ದೊಡ್ಡ ದೊಡ್ಡ ಹಂಡ್ಯ, ಬೋಗೋಣಿ, ಪರಾತ ಇಳಿಸಿ, ಏರಿಸಿ ಒಟ್ಟಾರೆ ಕೆಲಸ ಚಿಟಕಿ ಹಾರಿಸಿದಂಗ ಹಾರಿಸಿಬಿಡತಿದ್ದಳು. ಹೊಸದಾಗಿ ಬಂದ ಕೆಲವು ಹುಡಗರು ಭಾರದ ಕೆಲಸಕ್ಕ ಲೆಖ್ಖ ಹಾಕಿದ್ರ, "ಎಂಥಾ ಗಂಡಸೋ ನೀ... ನಾ ಒಂದು ಝುಟಕಿಗಿ ಮಾಡಿ ಒಗಿತೀನಿ" ಅಂದಾಗ ಅವರಿಗಿ ನಾಚಿಕ್ಯಾಗಿ, "ನಾ ಮಾಡ್ತೇನಿ ಬಿಡಕ್ಕಾ..." ಅಂತ ತೊದಲತಿದ್ದರು.

ಸುನಂದಾ ಇತ್ತೀಚೆಗೆ ದೊಡ್ಡ ಕಾರ್ಯಕ್ರಮಗಳಿಗೆ ಬೇಕಾದ ಪಾತ್ರೆಗಳನ್ನೂ ಬಾಡಿಗೆಗೆ ಕೊಡಲಾರಂಭಿಸಿದಳು. ಅದರೊಂದಿಗೆ ಮನೆಯಲ್ಲಿಯೆ ನಡೆಯುವ ಸಣ್ಣ ಸಮಾರಂಭಗಳಿಗೆ